Akashvani : Bengaluru
National Bulletin In Kannada

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

02.09.2025 1310hrs

*******

ಮುಖ್ಯಾಂಶಗಳು

- ಸೆಮಿಕಂಡಕ್ಟರ್ ಭವಿಷ್ಯ ನಿರ್ಮಿಸಲು ಜಗತ್ತು ಸನ್ನದ್ಧ; ಸೆಮಿಕಂಡಕ್ಟರ್ ಚಿಪ್, ಡಿಜಿಟಲ್ ವಜ್ರಗಳು ಎಂದು ಬಣ್ಣಿಸಿದ ಪ್ರಧಾನಿ ನರೇಂದ್ರ ಮೋದಿ
- ಮೈಸೂರು ಅರಮನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ; ಎರಡು ದಿನಗಳ ರಾಜ್ಯ ಪ್ರವಾಸ ಮುಗಿಸಿ ಚೆನ್ನೈಗೆ ಪ್ರಯಾಣ
- ಬೆಂಗಳೂರಿಗೆ ಆಗಮಿಸಿದ ಜರ್ಮನ್ ವಿದೇಶಾಂಗ ಸಚಿವ ಜೋಹಾನ್ ವಾಡೆಫುಲ್; ಇಂದು ಇಸ್ರೋಗೆ ಭೇಟಿ
- ಭಾರತೀಯ ರೈಲ್ವೆ ಎಸ್‌ಬಿಐ ನಡುವೆ ಮಹತ್ವದ ಒಪ್ಪಂದ; ವಿಮಾ ಸೌಲಭ್ಯಕ್ಕೆ ಆದ್ಯತೆ
- ಆಸ್ಟ್ರೇಲಿಯಾದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಟಿ-೨೦ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ

><><><*><><><

ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ ಯಶೋಭೂಮಿಯಲ್ಲಿಂದು ಸೆಮಿಕಾನ್ ಇಂಡಿಯಾ ೨೦೨೫ ಉದ್ಘಾಟಿಸಿದರು. ಈ ವೇಳೆ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಮತ್ತಿತರರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಅವರು ಪ್ರಧಾನಿ ಅವರಿಗೆ ವಿಕ್ರಂ-೩೨ ಬಿಟ್ ಪ್ರೊಸೆಸರ್ ಹಾಗೂ ಪರೀಕ್ಷಾ ಚಿಪ್ ಗಳನ್ನು ವಿತರಿಸಿದರು. ವಿಕ್ರಂ-೩೨ ಬಿಟ್ ಪ್ರೊಸೆಸರ್ ಮೇಕ್ ಇನ್ ಇಂಡಿಯಾ ಅಡಿ ಸಂಪೂರ್ಣ ದೇಶೀಯವಾಗಿ ತಯಾರಿಸಲಾಗಿರುವ ಮೈಕ್ರೊ ಪ್ರೊಸೆಸರ್ ಆಗಿದ್ದು, ದನ್ನು ಪ್ರತಿಕೂಲ ಹವಾಮಾನಗಳ ಸಂದರ್ಭಗಳಲ್ಲಿ ಬಳಕೆ ಮಾಡಬಹುದಾಗಿದೆ. ಇದನ್ನು ಇಸ್ರೋದ ಸೆಮಿ ಕಂಡಕ್ಟರ್ ಲ್ಯಾಬ್ ನಲ್ಲಿ ಅಭಿವೃದ್ಧಿಪಡಿಸಲಾಗಿದೆ. ಮೂರು ದಿನಗಳ ಈ ಸಮ್ಮೇಳನದಲ್ಲಿ ಸೆಮಿಕಂಡಕ್ಟರ್ ಪೂರಕ ವ್ಯವಸ್ಥೆಯ ಸುಸ್ಥಿರ ಸ್ಥಿತಿ ಸ್ಥಾಪಕತ್ವ ಮತ್ತು ಉತ್ಕೃಷ್ಟ ಅಭಿವೃದ್ಧಿಗೆ ಗಮನಹರಿಸಲಾಗುವುದು. ಈ ಸಮಾವೇಶ ಭಾರತದ ಸೆಮಿಕಂಡಕ್ಟರ್ ವಲಯದ ನೀಲನಕ್ಷೆಯಾಗಲಿದೆ ಎಂದು ಬಣ್ಣಿಸಲಾಗುತ್ತಿದ್ದು, ಇದರಿಂದ ಸೆಮಿಕಂಡಕ್ಟರ್ ಪೂರಕ ವ್ಯವಸ್ಥೆ

ಪ್ರಗತಿಯಾಗುವುದಲ್ಲದೆ, ಅಂತಾರಾಷ್ಟ್ರೀಯ ಸಹಕಾರಕ್ಕೂ ನೆರವಾಗಲಿದೆ. ಸಮಾವೇಶದಲ್ಲಿ ಸೆಮಿಕಾನ್ ಇಂಡಿಯಾ ಕಾರ್ಯಕ್ರಮದ ಪ್ರಗತಿ, ಸ್ಮಾರ್ಟ್ ಕಾರ್ಯನಿರ್ವಹಣೆ, ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ನಾವೀನ್ಯತೆ, ಕೃತಕ ಬುದ್ಧಿಮತ್ತೆ, ಹೂಡಿಕೆ ಅವಕಾಶಗಳು, ರಾಜ್ಯಮಟ್ಟದ ನೀತಿ ಜಾರಿ ಸೇರಿದಂತೆ ಹಲವು ವಿಷಯಗಳ ಕುರಿತು ಗೋಷ್ಠಿಗಳು ನಡೆಯಲಿವೆ. ೪೮ಕ್ಕೂ ಅಧಿಕ ರಾಷ್ಟ್ರಗಳ ೨ ಸಾವಿರದ ೫೦೦ ಪ್ರತಿನಿಧಿಗಳು ಸೇರಿದಂತೆ ೨೦ ಸಾವಿರಕ್ಕೂ ಅಧಿಕ ಮಂದಿ ಸಮಾವೇಶದಲ್ಲಿ ಭಾಗವಹಿಸಿದ್ದಾರೆ.  ಪ್ರಧಾನಿ ನರೇಂದ್ರ ಮೋದಿ ಮಾತನಾಡಿ, ಭಾರತದ ಈ ಒಂದು ಸಣ್ಣ ಚಿಪ್ ವಿಶ್ವದಲ್ಲೇ ಅತಿದೊಡ್ಡ ಬದಲಾವಣೆ ತರುವ ದಿನ ದೂರವಿಲ್ಲ ಎಂದು ಹೇಳಿದರು. ಇಡೀ ವಿಶ್ವವೇ ಭಾರತದ ಬಗ್ಗೆ ನಂಬಿಕೆ ಇಟ್ಟಿದ್ದು, ಇದರ ಜೊತೆಗೆ ಭಾರತದೊಂದಿಗೆ ಸೆಮಿಕಂಡಕ್ಟರ್ ಭವಿಷ್ಯವನ್ನು ನಿರ್ಮಿಸಲು ಜಗತ್ತು ಸಿದ್ಧವಾಗಿದೆ. ಸೆಮಿಕಂಡಕ್ಟರ್ ಜಗತ್ತಿನಲ್ಲಿ, ತೈಲವನ್ನು ಕಪ್ಪು ಚಿನ್ನ ಎಂದು ಕರೆಯಲಾಗುತ್ತದೆ. ಆದರೆ ಚಿಪ್‌ಗಳನ್ನು ಡಿಜಿಟಲ್ ವಜ್ರಗಳು ಎಂದು ಪರಿಗಣಿಸಲಾಗುತ್ತದೆ ಎಂದು ಬಣ್ಣಿಸಿದರು. ೨೧ ನೇ ಶತಮಾನದಲ್ಲಿ ಸೆಮಿಕಂಡಕ್ಟರ್‌ಗಳ ಮಹತ್ವವನ್ನು ಕಳೆದ ಶತಮಾನದಲ್ಲಿ ತೈಲದ ಪಾತ್ರಕ್ಕೆ ಪ್ರಧಾನಿ ಹೋಲಿಸಿದ್ದಾರೆ.

ಧ್ವನಿ : ಪ್ರಧಾನಮಂತ್ರಿ ನರೇಂದ್ರ ಮೋದಿ ( 31 ಸೆಕೆಂಡುಗಳು)

ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, ಕೆಲವೇ ವರ್ಷಗಳ ಹಿಂದೆ ನಾವು ಪ್ರಧಾನಿ ಅವರ ದೂರದೃಷ್ಟಿ ಪರಿಣಾಮ ಮೊದಲ ಬಾರಿಗೆ ಸೆಮಿಕಂಡಕ್ಟರ್ ಮಿಷನ್ ಆರಂಭಿಸಲಾಯಿತು. ಕೇವಲ ಮೂರೂವರೆ ವರ್ಷಗಳಲ್ಲಿ ನಾವು ಇಡೀ ವಿಶ್ವವೇ ಭಾರತದತ್ತ ತಿರುಗು ನೋಡುವಂತಹ ಸಾಧನೆ ಮಾಡಿದ್ದು, ಸದ್ಯ ೫ ಸೆಮಿಕಂಡಕ್ಟರ್ ಘಟಕಗಳ ನಿರ್ಮಾಣ ಕ್ಷಿಪ್ರ ಗತಿಯಲ್ಲಿ ಸಾಗಿದೆ. ನಾವು ಭಾರತದಲ್ಲೇ ತಯಾರಿಸಿದ ಮೊದಲ ಚಿಪ್ ಅನ್ನು ಪ್ರಧಾನಿ ಅವರಿಗೆ ನೀಡಿದ್ದೇವೆ ಎಂದರು.  ನಾವು ಅನಿರೀಕ್ಷಿತ ಕಾಲಘಟ್ಟದಲ್ಲಿ ಬದುಕುತ್ತಿದ್ದೇವೆ. ಜಾಗತಿಕ ನೀತಿಗಳ ಬಿಕ್ಕಟ್ಟು ನಮ್ಮನ್ನು ತುಂಬಾ ಅನಿಶ್ಚಿತತೆಗೆ ದೂಡಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಭಾರತ ಸ್ಥಿರತೆ ಮತ್ತು ಪ್ರಗತಿಯ ದಾರಿದೀಪವಾಗಿ ನಿಂತಿದೆ. ಹೂಡಿಕೆದಾರರು ಭಾರತಕ್ಕೆ ಆಗಮಿಸಬೇಕು. ಅದಕ್ಕೆ ಕಾರಣ ನಮ್ಮ ನೀತಿಗಳು ಅತ್ಯಂತ ಸ್ಥಿರವಾಗಿವೆ ಎಂದರು.

><><><*><><><

ರಾಪತಿ ದ್ರೌಪದಿ ಮುರ್ಮು ಅವರು, ಇಂದು ಬೆಳಗ್ಗೆ ಮೈಸೂರು ಅರಮನೆಗೆ ಭೇಟಿ ನೀಡಿ, ವಿವಿಧ ಪ್ರಾಂಗಣಗಳನ್ನು ಕುತೂಹಲದಿಂದ ವೀಕ್ಷಿಸಿದರು. ರಾಜವಂಶಸ್ಥೆ, ರಾಜಮಾತೆ, ಪ್ರಮೋದಾದೇವಿ ಒಡೆಯರ್ ಅವರು, ರಾಷ್ಟ್ರಪತಿಯವರನ್ನು, ಸಾಂಪ್ರದಾಯಿಕ ಗೌರವಗಳೊಂದಿಗೆ ಬರಮಾಡಿಕೊಂಡು, ಸತ್ಕರಿಸಿದರು.  ಅರಮನೆಯಲ್ಲಿ ಉಪಾಹಾರ ಸೇವಿಸಿದ ರಾಷ್ಟ್ರಪತಿಯವರು, ರಾಜವಂಶಸ್ಥರೊಂದಿಗೆ ಸಮಾಲೋಚಿಸಿದರು. ಮೈಸೂರು ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲರು

ಹಾಗೂ ಮುಖ್ಯಮಂತ್ರಿಯವರು, ರಾಷ್ಟ್ರಪತಿಗಳನ್ನು ಬೀಳ್ಕೊಟ್ಟಿದ್ದು, ಭಾರತೀಯ ವಾಯುಸೇನೆಯ ವಿಮಾನದಲ್ಲಿ, ಚೆನ್ನೈಗೆ ಪ್ರಯಾಣ ಬೆಳೆಸಿದರು.

><><><*><><><

ಜರ್ಮನ್ ವಿದೇಶಾಂಗ ಸಚಿವ ಜೋಹಾನ್ ವಾಡೆಫುಲ್ ಇಂದು  ಬೆಂಗಳೂರಿಗೆ ಆಗಮಿಸಿದರು. ಭಾರತ-ಜರ್ಮನ್ ಸಂಬಂಧಗಳ ಹೆಚ್ಚುತ್ತಿರುವ ಕಾರ್ಯತಂತ್ರದ ಮಹತ್ವವನ್ನು  ಅವರು ಒತ್ತಿಹೇಳಿದರು. ಎರಡು ದಿನಗಳ ಅವರ ಪ್ರವಾಸ ಎರಡು ಪ್ರಜಾಪ್ರಭುತ್ವಗಳ ರಾಷ್ಟ್ರಗಳ ನಡುವಿನ ಬಲವಾದ ಮತ್ತು ವಿಕಸನಗೊಳ್ಳುತ್ತಿರುವ ಸಂಬಂಧಗಳನ್ನು ಒತ್ತಿಹೇಳಿದೆ ಇದು ಸಚಿವ ವಾಡೆಫುಲ್ ಅವರ ಮೊದಲ ಭಾರತ  ಭೇಟಿಯಾಗಿದೆ. ಭಾರತವನ್ನು "ಇಂಡೋ-ಪೆಸಿಫಿಕ್‌ನಲ್ಲಿ ಪ್ರಮುಖ ಪಾಲುದಾರ" ಎಂದು ಬಣ್ಣಿಸಿದ ವಾಡೆಫುಲ್, ದ್ವಿಪಕ್ಷೀಯ ಸಹಕಾರದ ಮಹತ್ವವವನ್ನು ಪ್ರಸ್ತಾಪಿಸಿದರು. ಬೆಂಗಳೂರಿನಲ್ಲಿ ತಮ್ಮ ಭೇಟಿಯನ್ನು ಆರಂಭಿಸಲಿರುವ ವಾಡೆಫುಲ್, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಪ್ರಧಾನ ಕಚೇರಿಗೆ ಭೇಟಿ ನೀಡಲಿದ್ದಾರೆ. ಸಚಿವ ವಾಡೆಫುಲ್ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಮತ್ತು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರೊಂದಿಗೆ ದೆಹಲಿಯಲ್ಲಿ ಮಾತುಕತೆ ನಡೆಸಲಿದ್ದಾರೆ.

><><><*><><><

ಭಾರತದ ಎರಡು ಪ್ರಮುಖ ಸಂಸ್ಥೆಗಳಾದ, ವಿಶ್ವದ ಅತಿದೊಡ್ಡ ರೈಲುಜಾಲಗಳಲ್ಲಿ ಒಂದಾದ ಭಾರತೀಯ ರೈಲ್ವೆ ಮತ್ತು ದೇಶದ ಅತಿದೊಡ್ಡ ಸಾರ್ವಜನಿಕ ವಲಯದ ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನವದೆಹಲಿಯಲ್ಲಿಂದು ಮಹತ್ವದ ತಿಳಿವಳಿಕೆ ಒಪ್ಪಂದಕ್ಕೆ ಸಹಿ ಹಾಕಿವೆ.  ರೈಲ್ವೆ ಸಚಿವ ಅಶ್ವಿನಿವೈಷ್ಣವ್, ರೈಲ್ವೆ ಮಂಡಳಿಯ ಅಧ್ಯಕ್ಷ ಸತೀಶ್ ಕುಮಾರ್ Sಃl ಅಧ್ಯಕ್ಷ ಸಿ.ಎಸ್. ಸೆಟ್ಟಿ ಅವರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಿತು. ಸುಮಾರು ೭ ಲಕ್ಷ ರೈಲ್ವೆ ಉದ್ಯೋಗಿಗಳು Sಃlನೊಂದಿಗೆ ವೇತನ ಖಾತೆಗಳನ್ನು ನಿರ್ವಹಿಸುತ್ತಿರುವುದರಿಂದ, ಈ ಒಪ್ಪಂದವು ನೌಕರರ ಕಲ್ಯಾಣದ ಕಡೆಗೆ ಒಂದು ಪ್ರಮುಖ ಹೆಜ್ಜೆ ಇಟ್ಟಂತಾಗಿದೆ. ಈ ಒಪ್ಪಂದದಡಿ Sಃl ಬ್ಯಾಂಕ್ ನಲ್ಲಿ ವೇತನ ಖಾತೆಗಳನ್ನು ನಿರ್ವಹಿಸುವ ರೈಲ್ವೆ ನೌಕರರಿಗೆ ವಿಮಾ ರಕ್ಷಣಾ ವ್ಯಾಪ್ತಿಯನ್ನು ಗಮನಾರ್ಹವಾಗಿ ಹೆಚ್ಚಳ ಮಾಡಲಾಗಿದೆ. ಆಕಸ್ಮಿಕ ಮರಣದ ಸಂದರ್ಭದಲ್ಲಿ ಅಉಇಉIS ಅಡಿಯಲ್ಲಿ ಬರುವ ಎ, ಬಿ ಮತ್ತು ಸಿ ಶ್ರೇಣಿಯ ಉದ್ಯೋಗಿಗಳಿಗೆ ಕ್ರಮವಾಗಿ ಸದ್ಯ ೧ ಲಕ್ಷದ ೨೦ ಸಾವಿರ ರೂಪಾಯಿ, ೬೦ ಸಾವಿರ ರೂಪಾಯಿ ಮತ್ತು ೩೦ ಸಾವಿರ ರೂಪಾಯಿ ಇದ್ದು, ವಿಮಾ ಪ್ರಯೋಜನವನ್ನು ೧ ಕೋಟಿ ರೂಪಾಯಿಗೆ ಹೆಚ್ಚಳ ಮಾಡಲಾಗಿದೆ.

><><><*><><><

ವಿದೇಶಾಂಗ ವ್ಯವಹಾರಗಳು, ಅರಣ, ಪರಿಸರ ಮತ್ತು ಹವಾಮಾನ ಬದಲಾವಣೆ ಖಾತೆ ರಾಜ್ಯಸಚಿವ ಕೀರ್ತಿವರ್ಧನ್ ಸಿಂಗ್ ಗುರುವಾರದಿಂದ ಎರಡು ದಿನಗಳ ಕಾಲ ಐಸ್ಲ್ಯಾಂಡ್‌ಗೆ ಭೇಟಿ ನೀಡಲಿದ್ದಾರೆ. ತಮ್ಮ ಭೇಟಿಯ ಸಮಯದಲ್ಲಿ ಸಚಿವರು ಭಾರತ-ನಾರ್ಡಿಕ್‌ಟ್ರ್ಯಾಕ್ ೧.೫ ಸಂವಾದದ ಎರಡನೇ ಆವೃತ್ತಿಯಲ್ಲಿ ಭಾಗವಹಿಸಲಿದ್ದಾರೆ. ಸಚಿವರು ಐಸ್ಲ್ಯಾಂಡ್ ಸಂಸತ್ತಿನ ಸ್ಪೀಕರ್, ಐಸ್ಲ್ಯಾಂಡ್‌ನ ವಿದೇಶಾಂಗ ಸಚಿವರು ಮತ್ತು ಇತರ ಗಣ್ಯರೊಂದಿಗೆ ಸಭೆ ನಡೆಸಲಿದ್ದಾರೆ. ಅವರು ಐಸ್ಲ್ಯಾಂಡ್‌ನಲ್ಲಿರುವ ಭಾರತೀಯ ಸಮುದಾಯದೊಂದಿಗೆ ಸಹ ಸಂವಹನ ನಡೆಸಲಿದ್ದಾರೆ.

><><><*><><><

ಚೆನ್ನೈ ವಿಮಾನ ನಿಲ್ದಾಣದ ಕಾರ್ಗೋದಲ್ಲಿ ಬೃಹತ್ ಚಿನ್ನ ರಫ್ತು ವಂಚನೆಗೆ ಸಂಬಂಧಿಸಿದಂತೆ ಕೇಂದ್ರ ತನಿಖಾ ದಳ ಪ್ರಥಮ ಮಾಹಿತಿ ವರದಿ ದಾಖಲಿಸಿದೆ. ೨೦೨೦ ಮತ್ತು ೨೦೨೨ ರ ನಡುವೆ ಕೇಂದ್ರ ಸರ್ಕಾರಕ್ಕೆ ವಾರ್ಷಿಕವಾಗಿ ೧ ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ವಂಚನೆ ಮಾಡಿದ ಪ್ರಕರಣದಲ್ಲಿ ಎಫ್‌ಐಆರ್. ದಾಖಲು ಮಾಡಲಾಗಿದೆ. ಐವರು ಕಸ್ಟಮ್ಸ್ ಅಧಿಕಾರಿಗಳು, ಒಬ್ಬ ಆಭರಣ ಮೌಲ್ಯಮಾಪಕ, ಒಬ್ಬ ಕಸ್ಟಮ್ಸ್ ಏಜೆಂಟ್ ಮತ್ತು ನಾಲ್ವರು ಚಿನ್ನಾಭರಣ ತಯಾರಕರು ಸೇರಿದಂತೆ ೧೩ ಆರೋಪಿಗಳನ್ನು ಎಫ್‌ಐಆರ್‌ನಲ್ಲಿ ಹೆಸರಿಸಲಾಗಿದೆ.

><><><*><><><

ಜಮ್ಮು ಮತ್ತು ಕಾಶ್ಮೀರದಲ್ಲಿ, ತ್ರಿಕೂಟ ಬೆಟ್ಟಗಳಲ್ಲಿ ನಿರಂತರ ಹವಾಮಾನ ವೈಪರೀತ್ಯದಿಂದಾಗಿ ಶ್ರೀ ಮಾತಾ ವೈ?ದೇವಿ ಪವಿತ್ರ ಗುಹಾ ದೇವಾಲಯ ಯಾತ್ರೆಯನ್ನು ಸತತ ಎಂಟನೇ ದಿನವೂ ಸ್ಥಗಿತಗೊಳಿಸಲಾಗಿದೆ.

><><><*><><><

ಆಸ್ಟ್ರೇಲಿಯಾದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಇಂದು ಟಿ-೨೦ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದ್ದಾರೆ. ಅವರು ತಮ್ಮ ಟೆಸ್ಟ್ ಮತ್ತು ಏಕದಿನ ವೃತ್ತಿಜೀವನದತ್ತ ಗಮನ ಹರಿಸಲು ಬಯಸಿದ್ದಾರೆ. ಸ್ಟಾರ್ಕ್ ಟಿ೨೦ ಪಂದ್ಯದಲ್ಲಿ ಆಸ್ಟ್ರೇಲಿಯಾದ ಎರಡನೇ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಆಗಿ ಹೊರ ಹೊಮ್ಮಿದ್ದಾರೆ. ಆಡಿದ ಆರು ಟಿ- ೨೦ ವಿಶ್ವಕಪ್‌ಗಳಲ್ಲಿ ಐದರಲ್ಲಿ ಇವರು ಕಣಕ್ಕಿಳಿದ್ದಾರೆ. ಮಿಚೆಲ್ ಸ್ಟಾರ್ಕ್ ಆಸ್ಟ್ರೇಲಿಯಾ ಪರ ೬೫ ಟಿ- ೨೦ ಪಂದ್ಯಗಳನ್ನಾಡಿದ್ದಾರೆ. ಅದರಲ್ಲೂ ೨೦೨೧ ರಲ್ಲಿ ಚೊಚ್ಚಲ ಬಾರಿ ಟಿ೨೦ ವಿಶ್ವಕಪ್ ಗೆದ್ದುಕೊಡುವಲ್ಲಿ ಸ್ಟಾರ್ಕ್ ಪ್ರಮುಖ ಪಾತ್ರವಹಿಸಿದ್ದರು.

><><><*><><><

ಬಿಹಾರದ ರಾಜ್‌ಗಿರ್‌ನಲ್ಲಿ ನಡೆಯುತ್ತಿರುವ ಪುರುಷರ ಏಷ್ಯಾ ಕಪ್ ಹಾಕಿ ಚಾಂಪಿಯನ್ ಶಿಪ್ ಪಂದ್ಯಾವಳಿಯಲ್ಲಿ ಭಾರತ, ಕಜಕಿಸ್ತಾನದ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ. ತೀವ್ರ

ಪೈಪೋಟಿಯಿಂದ ಕೂಡಿದ್ದ ಪಂದ್ಯದಲ್ಲಿ ಭಾರತ ೧೫-೦ ಗೋಲುಗಳಿಂದ ಜಯಗಳಿಸಿ ಸತತ ಮೂರನೇ ಗೆಲುವು ದಾಖಲಿಸಿತು.

><><><*><><><